ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 16/2017**

| | | |
|---|---|---|
| ಸಾಕ್ಷಿಯ ಹೆಸರುಃ | ಬನ್ನಯ್ಯ | ಪ್ರಾಸಾಃ 3 |
| ಗಂಡನ/ತಂದೆಯ ಹೆಸರುಃ | ತ್ರಿಪುರಾಂತಯ್ಯ | ಚಾಸಾಃ 1 |
| ವಯಸ್ಸುಃ | 60 ವರ್ಷ | ದಿಃ 06-12-2025 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ನೀಲಹಳ್ಳಿ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

1. ಚಾಸಾಃ 6 ರಿಂದ 9 ರವರು ನನ್ನ ಸಹೋದರರು. ನನಗೆ ಆರೋಪಿತರ ಪರಿಚಯವಿದೆ. ದಿನಾಂಕಃ 27-06-2015 ರಲ್ಲಿ ಕಳ್ಳತನವಾಗಿರುತ್ತದೆ. ಸದರಿ ಸಮಯದಲ್ಲಿ ಹೊಡೆ-ಬಡೆ ಮಾಡಿ ಜಗಳ ಮಾಡಿರುತ್ತಾರೆ. ನಾವು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಸದರಿ ನಮಗೆ 25 ಜನ ಜೊತೆಯಾಗಿ ಹೊಡೆದಿರುತ್ತಾರೆ. ಸದರಿ ದೂರು ನೀಡಿದ ನಂತರ 2 ದಿನಗಳ ಬಳಿಕ ಬನ್ನಿ ಎಂದು ತಿಳಿಸಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನವಾಗಿರುತ್ತದೆ. 8 ಕ್ವಿಂಟಾಲ ಅಕ್ಕಿ, 2 ಕ್ವಿಂಟಾಲ ಜೋಳ, ಹೊಲದಲ್ಲಿರುವ ಸೋಲಾರ ಬ್ಯಾಟರಿ, ಬೋರವೆಲ್ ಮೋಟಾರ, ಸ್ಪಿಂಕಲರ ಪೈಪ, 4 ತೋಲ ಬಂಗಾರ 20 ತೊಲ ಬೆಳ್ಳಿ, 4 ಲಕ್ಷ ರೂ. ಹಣ, ಟ್ರ್ಯಾಕ್ಟರ ಟೈಯರ, ನೀರಿನ ಪಂಪ್ ಇನ್ನಿತರ ಸಾಮಾನುಗಳು ಕಳ್ಳತನವಾಗಿರುತ್ತವೆ. ಚಾಸಾಃ 7 ರವರ ಮನೆಯಲ್ಲಿ 10 ಕ್ವಿಂಟಾಲ ಅಕ್ಕಿ, 4 ತೊಲ ಬಂಗಾರ, 25 ರೂ. ನಗದು, ಅಡಿಗೆ ಎಣ್ಣೆ ಬಾಟಲಿಗಳು ಕಳ್ಳತನವಾಗಿರುತ್ತವೆ. ಚಾಸಾಃ 6 ರವರು ಮನೆಯಲ್ಲಿ 8 ಕ್ವಿಂಟಾಲ ಅಕ್ಕಿ, 2 ಕ್ವಿಂಟಾಲ ಜೋಳ, ಅರ್ಧ ಕ್ವಿಂಟಾಲ ತೊಗರಿ ಬೇಳೆ, ತಾಳಿ ಚೈನ 3 ತೊಲ, 20 ತೊಲ ಬೆಳ್ಳಿ ಚೈನ ಕಳ್ಳತನವಾಗಿರುತ್ತದೆ. ಚಾಸಾಃ 8 ರವರ ಮನೆಯಲ್ಲಿ 2 ಕ್ವಿಂಟಾಲ ಅಕ್ಕಿ, 5 ಚೀಲ ಶೇಂಗಾ, 50,000/- ರೂ. ನಗದು ಹಣ, ಬೆಳ್ಳಿ 20 ರಿಂದ 25 ತೊಲ, ಟಿವಿ, ಅಲಮಾರಿ ಕಳ್ಳತನವಾಗಿರುತ್ತದೆ. ಚಾಸಾಃ 9 ರವರ ಮನೆಯಲ್ಲಿ ಅರ್ಧ ಕ್ವಿಂಟಾಲ ಜೋಳ, 2 ಕ್ವಿಂಟಾಲ ಅಕ್ಕಿ, 1 ತೊಲ ಬಂಗಾರ, 25,000/-ರೂ. ನಗದು, 1 ತೊಲ ಬಂಗಾರ, 10 ತೊಲ ಬೆಳ್ಳಿ ಕಳ್ಳತನವಾಗಿರುತ್ತದೆ. ಪೋಲಿಸರಿಗೆ ಸದರಿ ದೂರನ್ನು ನೀಡಿರುತ್ತೇವೆ. ಸದರಿ ಡಿ.ವೈ.ಎಸ್. ಪಿ ಗೆ ಮಾಹಿತಿ ತಿಳಿಸಿದಾಗ ಪ್ರ.ವ. ವರದಿಯನ್ನು ದಾಖಲಿಸಿರುತ್ತಾರೆ.

2. ಸದರಿ ಆರೋಪಿತರು ನನ್ನ ಮನೆಯನ್ನು ಕಳ್ಳತನ ಮಾಡಿರುತ್ತಾರೆ. ನಾನು ಮರು ಹೇಳಿಕೆ ನೀಡಿರುವುದಿಲ್ಲ. ಸದರಿ ಪೊಲಿಸರು ಪರಿಶೀಲನೆ ಮಾಡಿರುತ್ತಾರೆ. ಸದರಿ ಸಾಕ್ಷಿಯು ಜಪ್ತಿಪಡಿಸಿಕೊಂಡ ವಸ್ತುಗಳ ಫೊಟೋಗಳನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ರಿಂದ 36 ಎಂದು ಗುರುತಿಸಲಾಯಿತು. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೊಟೋಗಳನ್ನು ನಿಪಿ-3 ರಿಂದ ನಿಪಿ-36, 38 ರಿಂದ 58 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

ನಾನು ದಿನಾಂಕಃ 24-11-2015 ರಂದು ನಿಪಿ-37 ರಂತೆ ಓದಿ ಹೇಳಲಾದ ಹೇಳಿಕೆಯನ್ನು ನಾನು ಪೊಲಿಸರ ಮುಂದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 28-03-2016 ರಂದು ಪುರವಣಿಕೆ ಹೇಳಿಕೆಯನ್ನು ನೀಡಿ ಕಳುವಾದ ವಸ್ತುಗಳನ್ನು ಗುರುತಿಸಿರುತ್ತೇನೆ ಮತ್ತು 8 ಜನ ಆರೋಪಿತರಲ್ಲಿ ಮಲ್ಲಪ್ಪ, ಭೀಮಣ್ಣ, ಉತ್ತಪ್ಪ, ಬನ್ನಪ್ಪ, ವೀರಬಸವ, ಶಿವಲಿಂಗ, ಹಣಮಂತ, ಯುವರಾಜ ಇವರನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 25 ಜನ ಕಳ್ಳತನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟಿ ಸವಾಲು ಃಆರೋಪಿ ಪರ ಶ್ರಿ ಜಿ**.** ಎಸ್**,** ಎನ್ ವಕೀಲರಿಂದಃ

1. ನಾನು ನೀಲಹಳ್ಳಿ ಗ್ರಾಮದಲ್ಲಿ ನಮ್ಮ ಹಿರಿಯರ ಕಾಲದಿಂದ ವಾಸವಾಗಿರುತ್ತೇನೆ. ನಮ್ಮ ಊರಿನಲ್ಲಿ ನಮ್ಮ 5 ಮನೆಗಳು ಇವೆ. ನಮ್ಮ ಮತ್ತು ಆರೋಪಿತರ ನಡುವೆ ಹನುಮಾನ ಗುಡಿ ಜಾಗಕ್ಕೊಸ್ಕರ ಜಗಳವಿರುತ್ತದೆ ಎಂದರೆ ಸಾಕ್ಷಿಯು ಅದು ನಮ್ಮ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರು ನಮ್ಮ ವಿರುದ್ದ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಹನುಮಾನ ಗುಡಿಯ ಮುಂದಿರುವ ಜಾಗಕ್ಕೊಸ್ಕರ ಸಿವಿಲ್ ದಾವೆ ಹಾಕಿರುತ್ತಾರೆ ಎಂದರೆ ಸರಿ. ಕ್ರಿಮಿನಲ್ ಕೇಸ ಹಾಕಿರುತ್ತಾರೆ ಎಂದರೆ ಸರಿ. ಸದರಿ ಕ್ರಿಮಿನಲ್ ಕೇಸ ಸತ್ರ ನ್ಯಾಯಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ಕಳ್ಳತನವಾದ 1 ತಿಂಗಳ ನಂತರ ದೂರನ್ನು ನೀಡಿರುತ್ತೇವೆ. ಸದರಿ ದೂರನ್ನು ಶರಣಯ್ಯ ಇವರು ಬರೆಸಿರುತ್ತಾರೆ.

2. ದಿನಾಂಕಃ 26-07-2015 ರಂದು ಕಳ್ಳತನವಾಗಿರುತ್ತದೆ ಮತ್ತು ಹೊಡೆ-ಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನವಾಗಿದ್ದರ ಬಗ್ಗೆ ಸಾಬಣ್ಣ ಇವರು ಫೊನ ಕರೆ ಮಾಡಿ ತಿಳಿಸಿರುತ್ತಾರೆ. ಫೋನು ಮಾಡಿ ಮಾಹಿತಿ ಬಂದ ನಂತರ 8-10 ದಿನಗಳ ನಂತರ ಪೊಲಿಸರ ಠಾಣೆಗೆ ಹೋಗಿರುತ್ತೇವೆ. ಸದರಿ ಆರೋಪಿತರು ನಮ್ಮ ವಿರುದ್ದ ಕೇಸ ಹಾಕಿದ್ದರಿಂದ ಊರು ಬಿಟ್ಟು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಊರು ಬಿಡುವಾಗ ಮನೆಯ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜೋಳ, ಅಕ್ಕಿ, ಪೈಪುಗಳು, 4 ತೊಲ ಬಂಗಾರ, 20 ತೊಲ ಬೆಳ್ಳಿ, ಟ್ರ್ಯಾಕ್ಟರ ಟೈಯರ ಮತ್ತು ಪಂಪು ಕಳ್ಳತನವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಚಾಸಾಃ 7 ರವರ ಮನೆಯಲ್ಲಿ 10 ಕ್ವಿಂಟಾಲ ಅಕ್ಕಿ, 4 ತೊಲ ಬಂಗಾರ, ಅಡಿಗೆ ಎಣ್ಣೆ ಕಳ್ಳತನವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 6 ರವರ ಮನೆಯಲ್ಲಿ ಅಕ್ಕಿ, 3 ತೊಲ ಬಂಗಾರ, 20 ತೊಲ ಬೆಳ್ಳಿ, ಕಳ್ಳತನವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 8 ರವರ ಮನೆಯಲ್ಲಿ ಅಕ್ಕಿ , ಬಂಗಾರ, 50,000/-ರೂ. ನಗದು ಹಣ ಕಳ್ಳನವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 9 ರವರ ಮನೆಯಲ್ಲಿ ಜೋಳ, ಅಕ್ಕಿ, ಬಂಗಾರ, 25,000/- ರೂ. ನಗದು ಹಣ, 25 ತೊಲ ಬೆಳ್ಳಿ ಕಳ್ಳತನವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸೋಲಾರ ಪೈಪ ಯಾವ ಕಂಪನಿಯದ್ದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಬೆಳ್ಳಿ, ಬಂಗಾರ ಸಂಬಂಧಪಟ್ಟಂತೆ ಬಿಲ್ಲು ನೀಡಿರುವುದಿಲ್ಲ. ಸದರಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಯಾವುದೇ ವಸ್ತು ಇರಲಿಲ್ಲ ಎಂದರೆ ಸರಿಯಲ್ಲ. ಜಾಗದ ಸಲುವಾಗಿ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಫೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು. ಮಾ ಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಳ್ಳತನವಾಗಿರುವ ವಸ್ತುಗಳು ನನಗೆ ಸೇರಿರುತ್ತದೆ ಎಂದು ಯಾವುದೇ ಬಿಲ್ಲನ್ನು ನೀಡಿರುವುದಿಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ